ದಿನಾಂಕಃ 24-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲು ಃ ಪ್ರತಿವಾದಿ ಪರ ಶ್ರೀ ಬಿ ಪಿ ಪಿ ವಕೀಲರಿಂದಃ

3. ಈ ದಾವೆಯನ್ನು ಆಸ್ತಿ ಬೇಕೆಂದು ಮಾಡಿದ್ದೇನೆ. ಅವುಗಳ ಸರ್ವೇ ನಂಬರ 216/1 ಕ್ಷೇತ್ರ 7 ಎಕರೆ 39 ಗುಂಟೆ ಮತ್ತು 284/1 ಕ್ಷೇತ್ರ 11 ಎಕರೆ 07 ಗುಂಟೆ, ಮನೆ ಆಸ್ತಿಯಿದ್ದು ನಂಬರ ನೆನಪಿಲ್ಲ. ನಾನು ಎಸ್ ಎಸ್ ಎಲ್ ಸಿ ಓದಿದ್ದೇನೆ. ಸರ್ವೆ ನಂಬರ 105 ಕ್ಷೇತ್ರ 15 ಎಕರೆ 28 ಗುಂಟೆ ನಮ್ಮ ಮನೆತನಕ್ಕೆ ಸಂಬಂಧಪಟ್ಟ ಆಸ್ತಿ ಎಂದರೆ ಸರಿ. ಸದರಿ ಆಸ್ತಿ ಭೂ ನ್ಯಾಯ ಮಂಡಳಿ ನನ್ನ ತಂದೆಯ ಹೆಸರಿಗೆ ಮಂಜೂರು ಮಾಡಿತ್ತು ಎಂದರೆ ಸರಿ. ಸದರಿ ಮಂಜೂರು ಆದೇಶವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಡಿ. 1 ಎಂದು ಗುರುತಿಸಲಾಯಿತು. ನಿಡಿ. 1 ರ ಸ್ವತ್ತನ್ನು ಈ ದಾವಾದಲ್ಲಿ ಸೇರಿಸಿಲ್ಲ ಎಂದರೆ ಸರಿ. ನಮ್ಮ ಮನೆತನಕ್ಕೆ 51 ಎಕರೆ 13 ಗುಂಟೆ ಜಮೀನು ಇದೆ ಎಂದರೆ ಸರಿ. ಆ ಸಂಬಂಧ ಎ ಖಾತೆಯ ಉತಾರವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಡಿ. 2 ಎಂದು ಗುರುತಿಸಲಾಯಿತು. 1 ನೇ ಪ್ರತಿವಾದಿ ಹೆಸರಿಗೆ ಸರಕಾರ ಸರ್ವೇ ನಂಬರ 504 ರ ಜಮೀನನ್ನು ಮಂಜೂರು ಮಾಡಿದ್ದಾಗಿ, ಸದರಿ ಆದೇಶವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಡಿ. 3 ಎಂದು ಗುರುತಿಸಲಾಯಿತು. ಸದರಿ ಆಸ್ತಿಯಲ್ಲಿ ನಿಮಗೆ ಹಕ್ಕು ಇದೆಯಾ ಎಂದರೆ ಇದೆ. ಆದರೆ ಅದನ್ನು ನನ್ನ ತಂದೆ ಮಾರಾಟ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಸರ್ವೇ ನಂಬರ 504 ಕ್ಷೇತ್ರ 9 ಎಕರೆ 18 ಗುಂಟೆ ಜಮೀನಿನ ಪೈಕಿ ಪಶ್ಚಿಮ ಭಾಗದ 4 ಎಕರೆ ಜಮೀನನ್ನು 1 ನೇ ಪ್ರತಿವಾದಿ ಶಿವಪ್ಪ ತಂದೆ ಶಂಕ್ರಪ್ಪ ಗಂಗಾಯಿ ಮಾರಾಟ ಮಾಡಿದ್ದಾರೆ ಎಂದರೆ, ಸಾಕ್ಷಿ ನನ್ನ ತಂದೆ ಇದ್ದಾಗಲೇ ಮಾರಾಟ ಮಾಡಿದ್ದರು, ನನ್ನ ತಮ್ಮ ಮಾರಾಟ ಮಾಡಿಲ್ಲ, ನಾವೆಲ್ಲ ಒಟ್ಟು ಕುಟುಂಬದಲ್ಲಿ ಇದ್ದೇವೆ ಎಂದು ನುಡಿಯುತ್ತಾರೆ. ಸದರಿ ಖರೀದಿ ಪತ್ರಕ್ಕೆ ನನ್ನ ತಂದೆ ಸಹಿ ಮಾಡಿಲ್ಲ ಎಂದರೆ, ಮಾರಾಟ ಮಾಡಿ ಅವರು ತೀರಿಕೊಂಡ ಕಾರಣ ಸಹಿ ಮಾಡಿಲ್ಲ ಎಂದು ನುಡಿಯುತ್ತಾರೆ. ಈ ದಾವಾದಲ್ಲಿ ಉಳಿದ ಪಶ್ಚಿಮ ಭಾಗದ 4 ಎಕರೆ 18 ಗುಂಟೆ ಜಮೀನನ್ನು ಸೇರಿಸಿಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿಯಲ್ಲಿ ನನಗೂ ಸಹ ಹಕ್ಕಿದೆ.

ಮುಂದುವರೆದ ಪಾಟೀ ಸವಾಲು ಸಮಯ ಕೋರಿದ್ದು, ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೆ ಸರಿ ಇದೆ

Sd/-

ಹಿರಿಯ ದಿವಾಣಿ ನ್ಯಾಯಾಧೀಶರು,

ಕುಂದಗೋಳ.